CC No. 967/21
PW-1

ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **21.06.2024**

ಮುಂದುವರಿದ ಪಾಟೀ ಸವಾಲುಃ ಶ್ರೀ ಹೆಚ್ ಸಿ ಎಂ ಕೆ ವಕೀಲರಿಂದ

ಆರೋಪಿಯ ಪರಿಚಯ ಹಾಗೂ ಮನೆಯು ಗೊತ್ತಿದ್ದ ಕಾರಣ ಆರೋಪಿಯ ವಿಳಾಸದ ಬಗ್ಗೆ ಸರಿಯಾಗಿ ವಿಚಾರ ಮಾಡಿರುವುದಿಲ್ಲ. ನಿಪಿ 4 ಆರೋಪಿಗೆ ನೀಡಿದ ಮೇಲೆ ಸಂಬಂಧಪಟ್ಟ ಅಂಚೆ ಇಲಾಖೆಯವರನ್ನು ಭೇಟಿ ಮಾಡಿ ಆರೋಪಿಯ ಮನೆಯನ್ನು ತೋರಿಸಲು ಪ್ರಯತ್ನ ಪಟ್ಟಿರುವುದಿಲ್ಲ. ನಿಪಿ 4 ರಲ್ಲಿ ಉದ್ದೇಶ ಪೂರ್ವಕವಾಗಿ ಅವರ ವಿಳಾಸ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ 4 ಆರೋಪಿಗೆ ಯಾವ ಕಾರಣಕ್ಕೆ ಜಾರಿಯಾಗಿಲ್ಲ ಎಂದು ತಿಳಿದುಕೊಂಡಿರುವುದಿಲ್ಲ. ನಿಪಿ 4 ರಂತೆ ದಿ 19-05-2021 ಕ್ಕೆ ವಿಳಾಸದಲ್ಲಿ ಸಿಗಲಿಲ್ಲ ಎಂಬ ಕಾರಣಕ್ಕೆ ವಾಪಾಸ್ಸಾಗಿದೆ ಎಂದರೆ ಸರಿ . ಸದರಿ ವಿಚಾರವನ್ನು ಮುಚ್ಚಿಟ್ಟು ಕಾಲವಿಳಂಬ ಮಾಡಿ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ನಿಪಿ 4 ರಲ್ಲಿ ದಿ 28-05-2021 ಎಂದು ನಾವೇ ಬರೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ 3 ನ್ನು ದಿ 10-05-2021 ರಂದು ನೀಡಿದ್ದು ಹಿಂಭರಹ ಯಾಕೆ ಬಂದಿಲ್ಲ ಎಂದು ಅಂಚೆ ಕಚೇರಿಯಲ್ಲಿ ವಿಚಾರ ಮಾಡಿರುವುದಿಲ್ಲ. ಆರೋಪಿಯ ಸರಿಯಾದ ವಿಳಾಸಕ್ಕೆ ತಿಳುವಳಿಕೆ ಪತ್ರ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಹಣ ನೀಡಲು ನನ್ನ ಬಳಿ ಹಣ ಇತ್ತು ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆರೋಪಿ ನನಗೆ 10 ಲಕ್ಷದವರೆಗೆ ಹಣ ಕೇಳಿದ್ದು ನನ್ನ ಬಳಿ ಆಗ ರೂ 7,20,800/- ಮಾತ್ರ ಇದ್ದು ಅದನ್ನು ಆರೋಪಿಗೆ ನೀಡಿರುತ್ತೇನೆ . ಆರೋಪಿಗೆ ಹಣ ನೀಡುವ ಸಮಯದಲ್ಲಿ ಯಾವುದೇ ದಾಖಲೆಗಳನ್ನು ನಾನು ಪಡೆದಿರುವುದಿಲ್ಲ. ಆರೋಪಿಗೆ ಈ ಮೊದಲು ಬ್ಯಾಂಕ್ ಮೂಲಕ ವ್ಯವಹಾರ ಆಗಿರುವುದಿಲ್ಲ ಎಲ್ಲಾ ವ್ಯವಹಾರಗಳು ನಗಧಿನಲ್ಲೆ ಆಗಿರುತ್ತದೆ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರ ಬ್ಯಾಂಕ್ ಮೂಲಕ ಆಗಿರುವುದಿಲ್ಲ. ನಿಪಿ 1 ಎ ಆರೋಪಿಯದಲ್ಲ ಎಂದರೆ ಸರಿಯಲ್ಲ. ಆರೋಪಿ ನಿಪಿ 1 ನ್ನು ಬೈಲುಕೊಪ್ಪೆ ಗ್ರಾಮದ ರಾಜೇಶ್ ಎಂಬುವವರಿಗೆ ನೀಡಿದ್ದು ಅದನ್ನು ರಾಜೇಶ್

ಎಂಬುವವರು ಕಳೆದು ಹಾಕಿದ್ದು ನಂತರ ಅದು ನನಗೆ ಸಿಕ್ಕಿದ್ದನ್ನು ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ರಾಜೇಶ್‌ರವರಿಗೆ ಚೆಕ್ ನ್ನು ನೀಡಿದ ಸಮಯದಲ್ಲಿ ಸಹಿ ಮಾಡದೇ ಇದ್ದುದರಿಂದ ಆ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ನಿಪಿ 1 ನನಗೆ ದೊರೆತ ನಂತರ ಆರೋಪಿ ಬ್ಯಾಂಕ್‌ನಲ್ಲಿ ಅವರ ವಿಳಾಸ ಪಡೆದು ಅದನ್ನು ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಆರೋಪಿಯನ್ನು ಹೊರತು ಪಡಿಸಿ ಕ್ಯಾಲಿಯೇಟರ್ ಬೋಪಯ್ಯರವರಿಗೆ ಹಣ ಸಾಲ ನೀಡಿರುತ್ತೇನೆ . 2021 ರಲ್ಲಿ ಯಾವ ಮೊತ್ತದ ಆದಾಯವನ್ನು ಆದಾಯ ತೆರಿಗೆಯಲ್ಲಿ ತೋರಿಸಲಾಗಿದೆ ಎಂದು ನನಗೆ ನೆನಪಿಲ್ಲ. ನಾನು ಯಾವುದೇ ಆದಾಯ ತೆರಿಗೆಯಲ್ಲಿ ಆರೋಪಿಯಿಂದ ಹಣ ಬಾಕಿ ಬರುವ ಬಗ್ಗೆ ತೋರಿಸಿಲ್ಲ. ಆರೋಪಿಯಿಂದ ನನಗೆ ಯಾವುದೇ ಹಣ ಬಾಕಿ ಇಲ್ಲದೆ ಇರುವ ಕಾರಣ ಅದನ್ನು ಆದಾಯ ತೆರಿಗೆಯಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ 1 ನ್ನು ಆರೋಪಿ ಯಾವುದೇ ಸಮಯದಲ್ಲಿ ನನಗೆ ನೀಡಿಲ್ಲ ಎಂದರೆ ಸರಿಯಲ್ಲ. ಉದ್ದೇಶ ಪೂರ್ವಕವಾಗಿ ಆರೋಪಿಯ ವಿಳಾಸವನ್ನು ತಪ್ಪಾಗಿ ನಮೂದಿಸಿ ನೋಟಿಸ್ ನೀಡಿ ಕಾಲವಿಳಂಬವಾಗಿ ಈ ಪ್ರಕರಣ ದಾಖಲಿಸಿರುವುದರಿಂದ ಯಾವುದೇ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರ ದ ನ್ಯಾ ದಂ, ಕುಶಾಲನಗರ